**1 ನೇ ಹೆಚ್ಚುವರಿ ವಿಶೇಷ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಚಿಕ್ಕಮಗಳೂರು**

<u>ಸ್ಪೆಷಲ್ ಮೊಕದ್ದಮೆ ನಂಃ 40/2015</u>

| | | |
|---|---|---|
| ಸಾಕ್ಷಿದಾರರ ಹೆಸರು | - ಸಣ್ಣಯ್ಯ | ಪಿಡಬ್ಲೂ - 04 |
| ತಂದೆಯ ಹೆಸರು | - ನಂಜಯ್ಯ | ಸಿಡಬ್ಲೂ - 06 |
| ವಯಸ್ಸು | - 70 ವರ್ಷ | |
| ಉದ್ಯೋಗ | - ಕೂಲಿ ಕೆಲಸ | |
| ವಾಸ ಸ್ಥಳ | - ಹಾರಮಕ್ಕಿ | |

ದಿನಾಂಕಃ 23.10.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

*(ಈ ದಿನ 4 ನೇ ಆರೋಪಿ ನ್ಯಾಯಾಲಯಕ್ಕೆ ಗೈರು ಹಾಜರಿದ್ದು ಆತನ ಪರ ವಕೀಲರು ವಿನಾಯಿತಿ ಅರ್ಜಿ ಸಲ್ಲಿಸಿ ಸದರಿ ಆರೋಪಿಯನ್ನು ಗುರುತಿಸುವಿಕೆಯ ಬಗ್ಗೆ ಯಾವುದೇ ತಕರಾರು ಇಲ್ಲವೆಂದು ತಿಳಿಸಿರುತ್ತಾರೆ ಹಾಗಾಗಿ ಸದರಿ ಆರೋಪಿಯ ಗೈರು ಹಾಜರಿಯಲ್ಲಿ ಸಾಕ್ಷಿಯ ವಿಚಾರಣೆಯನ್ನು ನಡೆಸಲಾಯಿತು.)*

<u>ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ-</u>

1. ಈ ಪ್ರಕರಣದ ಎಲ್ಲಾ ಆರೋಪಿತರು ಗೊತ್ತು. ಅಮಿತ್ ಮತ್ತು ಅಜಿತ್ ಎಂಬುವವರು ಗೊತ್ತು. ಫ್ರಾಸಾ.1 ನನ್ನ ಮಗ. ಫ್ರಾಸಾ.2 ನನ್ನ ತಮ್ಮ. ಚಾಸಾ.5 ರವರು ಫ್ರಾಸಾ.2 ರವರ ಹೆಂಡತಿ. ಫ್ರಾಸಾ.3 ಗೊತ್ತು. ನಾನು ಪರಿಶಿಷ್ಟ ಜಾತಿಯ ಆದಿ ಕರ್ನಾಟಕ ಜನಾಂಗಕ್ಕೆ ಸೇರಿದವನು. ಎಲ್ಲಾ ಆರೋಪಿತರು ಒಕ್ಕಲಿಗ ಜನಾಂಗಕ್ಕೆ ಸೇರಿದವರು.

2. 2014 ನೇ ಇಸವಿಯಲ್ಲಿ ಒಂದು ದಿನ ಬೆಳಿಗ್ಗೆ ಸುಮಾರು 10 ಗಂಟೆಗೆ ಚಾಸಾ.5 ಇಂದಿರಾರವರು ನಮ್ಮ ಮನೆಯ ಹತ್ತಿರ ಇರುವ ನೀರಿನ ಟ್ಯಾಂಕಿನಿಂದ ನೀರನ್ನು ತರಲು ಹೋಗಿದ್ದರು. ಆಗ 1 ನೇ ಆರೋಪಿ ತಮ್ಮಣ್ಣಗೌಡ ಮತ್ತು 2 ನೇ ಆರೋಪಿ ಗಣಪತಿಗೌಡರವರು ಚಾಸಾ.5 ರವರನ್ನು ಕುರಿತು, ನೀವು ಇಲ್ಲಿಂದ ನೀರನ್ನು ತೆಗೆದುಕೊಂಡು ಹೋಗಬಾರದು ಎಂದು ಹೇಳಿ ಕೆಟ್ಟ ಮಾತುಗಳಿಂದ ಆಕೆಗೆ ಬೈದು, ಆಕೆಯ ತಲೆ ಜುಟ್ಟನ್ನು ಹಿಡಿದು ಎಳೆದಾಡಿದರು. ಅಷ್ಟರಲ್ಲಿ ಎನ್.ಆರ್.ಪುರಕ್ಕೆ ಹೋಗಿದ್ದ ನನ್ನ ಮಗನಾದ ಫ್ರಾಸಾ.1 ರವರು ಆಟೋದಲ್ಲಿ ಅಲ್ಲಿಗೆ ಬಂದು ನೀರಿನ ಟ್ಯಾಂಕಿನ ಬಳಿ ಯಾರೋ ಕೂಗಾಡುತ್ತಿದ್ದಾರೆ ಎಂದು ನೋಡಲು ಅಲ್ಲಿಗೆ ಹೋದರು. ಫ್ರಾಸಾ.1 ರವರು ಆರೋಪಿತರು ಚಾಸಾ.5 ರವರನ್ನು ಎಳೆದಾಡುತ್ತಿದ್ದನ್ನು ನೋಡಿ ನನ್ನ ಚಿಕ್ಕಮ್ಮನನ್ನು ಬಿಡಿ ಎಂದು ಹೇಳಿದನು. ಆಗ 1 ಮತ್ತು 2 ನೇ ಆರೋಪಿತರು ಫ್ರಾಸಾ.1 ರವರನ್ನು ಕುರಿತು, ಬೋಳಿಮಗನೇ ನೀನು ಯಾಕೆ ಇಲ್ಲಿಗೆ ಬಂದಿದ್ದೀಯಾ, ನಿನ್ನನ್ನು ಕೊಲೆ ಮಾಡುತ್ತೇವೆ ಎಂದು ಆತನನ್ನು ಓಡಾಡಿಸಿದರು. ಫ್ರಾಸಾ.1 ರವರು ಕೂಗಿಕೊಂಡಾಗ ಫ್ರಾಸಾ.2 ರವರು ಅಲ್ಲಿಗೆ ಬಂದು ನನ್ನ ಹೆಂಡತಿಯನ್ನು ಬಿಡಿ ಎಂದು ಹೇಳಿದನು. ಆಗ 1 ಮತ್ತು 2 ನೇ ಆರೋಪಿತರು ದೊಣ್ಣೆಯಿಂದ ಫ್ರಾಸಾ.2 ರವರಿಗೆ ಹೊಡೆದರು. ಅಮಿತ್ ಮತ್ತು ಅಜಿತ್ ರವರು ನನ್ನ ಮಗನಾದ ಫ್ರಾಸಾ.1 ರವರನ್ನು ಅಟ್ಟಾಡಿಸಿದಾಗ ಆತ ತಾನು ಆಟೋದಲ್ಲಿ ಬಂದಿದ್ದ ರಸ್ತೆಯ ಕಡೆ ಓಡಿದನು. ನಂತರ ಆತ ಎಲ್ಲಿಗೆ ಹೋದನು ಎಂದು ನನಗೆ ತಿಳಿಯಲಿಲ್ಲ. ಸಾಕ್ಷಿ ಮುಂದುವರೆದು ಫ್ರಾಸಾ.1 ರವರು ಸ್ವಲ್ಪ ದೂರ ಓಡಿ ಹೋಗಿ ಅವಿತು ಕುಳಿತ್ತಿದ್ದನು. ಅಮಿತ್ ಮತ್ತು ಅಜಿತ್ ರವರು ಫ್ರಾಸಾ.1 ರವರನ್ನು ಹುಡುಕಿಕೊಂಡು ಅಲ್ಲಿಗೆ ಹೋಗಿ

ದೊಣ್ಣೆಯಿಂದ ಆತನ ತಲೆಗೆ ಹೊಡೆಯಲು ಹೋದಾಗ ಅದರ ಪೆಟ್ಟು ಆತ ಬಲಭುಜಕ್ಕೆ ಬಿದ್ದು ಗಾಯವಾಗಿತ್ತು.

3. ನಂತರ ನಾನು ಯಾಕೆ ಕೂಗಾಡುತ್ತಿದ್ದಾರೆ ಎಂದು ನೋಡಲು ಹೋದೆನು. ಆಗ 3 ನೇ ಆರೋಪಿ ಸುರೇಶ್ ಒಂದು ದೊಣ್ಣೆಯಿಂದ ನನ್ನ ತಲೆಗೆ ಹೊಡೆದನು. ಅದರಿಂದ ನನ್ನ ತಲೆ ಸೀಳಿ ರಕ್ತಗಾಯವಾಯಿತು. ನಂತರ ನಾನು, ಫ್ರಾಸಾ.2 ಮತ್ತು ಚಾಸಾ.5 ರವರು ಮೂಡಿಗೆರೆ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದುಕೊಂಡೆವು. ನಂತರ ಫ್ರಾಸಾ.1 ರವರು ಅಲ್ಲಿಗೆ ಬಂದು ಚಿಕಿತ್ಸೆ ಪಡೆದುಕೊಂಡನು. ಅಲ್ಲಿನ ವೈದ್ಯರ ಸಲಹೆ ಮೇರೆಗೆ ನಾನು, ಫ್ರಾಸಾ.1, 2 ಮತ್ತು ಚಾಸಾ.5 ರವರು ಹಾಸನದ ಸರ್ಕಾರಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದುಕೊಂಡೆವು.

4. ನಂತರ ನಮ್ಮ ಕಡೆಯವರೊಬ್ಬರು ಪೊಲೀಸರಿಗೆ ದೂರನ್ನು ಕೊಟ್ಟಿದ್ದರು. ನಾನು ಚೇತರಿಸಿಕೊಂಡ ಬಳಿಕ ಪೊಲೀಸರಿಗೆ ಘಟನೆಯ ಬಗ್ಗೆ ಹೇಳಿಕೆ ಕೊಟ್ಟೆನು. ಆರೋಪಿತರು ಕೃತ್ಯಕ್ಕೆ ಬಳಸಿದ ದೊಣ್ಣೆಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಈಗಾಗಲೇ ಮು.ಮಾ.1 ಎಂದು ಗುರುತಿಸಲ್ಪಟ್ಟಿರುವ ದೊಣ್ಣೆಯನ್ನು ನೋಡಿ ಆರೋಪಿತರು ಹಲ್ಲೆ ಮಾಡಲು ಬಳಸಿದ್ದ ದೊಣ್ಣೆ ಅದೇ ಎಂದು ನುಡಿದಿರುತ್ತಾರೆ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅಭಿಯೋಜಕರು ಅನುಮತಿ ಕೇಳಿರುತ್ತಾರೆ ದಾಖಲೆಗಳನ್ನು ಪರಿಶೀಲಿಸಿ ಸಾಕ್ಷಿಯು ಅಭಿಯೋಜನೆಗೆ ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿದಿದ್ದರಿಂದ ಅನುಮತಿ ನೀಡಲಾಯಿತು)

<u>ಪಾಟೀ ಸವಾಲುಃ ವಿಶೇಷ ಸರ್ಕಾರಿ ಅಭಿಯೋಜಕರಿಂದಃ-</u>

5. ನೀವು ಗಲಾಟೆಯನ್ನು ಬಿಡಿಸಲು ಹೋದಾಗ ಅಮಿತ್ ಮತ್ತು ಅಜಿತ್ ರವರು ದೊಣ್ಣೆಯಿಂದ ನಿಮ್ಮ ತಲೆಗೆ ಹೊಡೆದಿದ್ದಾರೆ ಎಂದರೆ ಸಾಕ್ಷಿ ಹಿಂದಿನಿಂದ ಹೊಡೆದರು ಹಾಗಾಗಿ ಯಾರು ಹೊಡೆದರು ಎಂದು ಗೊತ್ತಾಗಲಿಲ್ಲ ಎನ್ನುತ್ತಾರೆ. ಫ್ರಾಸಾ.1 ರವರು ಆರೋಪಿತರಿಂದ ತಪ್ಪಿಸಿಕೊಂಡು ಆಟೋ ನಿಲ್ಲಿಸಿದ ಕಡೆ ಓಡಿ ಹೋಗಿ ಕಾಡಿನ ಗಿಡಗಳ ಮರೆಯಲ್ಲಿ ಕುಳಿತ್ತಿದ್ದಾಗ 3 ನೇ ಆರೋಪಿ ಫ್ರಾಸಾ.1 ರವರನ್ನು ಕುರಿತು, ನಿಲ್ಲೋ ಸೂಳೆಮಗನೇ, ಎಲ್ಲಿಗೆ ಓಡ್ತೀಯಾ, ನಿನ್ನನ್ನು ಕೊಂದು ಹಾಕುತ್ತೇನೆಂದು ಹೇಳಿ ಏಕಾಏಕಿ ತನ್ನ ಕೈಯಲ್ಲಿದ್ದ ದೊಣ್ಣೆಯಿಂದ ಫ್ರಾಸಾ.1 ರವರ ತಲೆಗೆ ಹೊಡೆಯಲು ಬೀಸಿದಾಗ ಅದರ ಪೆಟ್ಟು ಫ್ರಾಸಾ.1 ರವರ ಭುಜಕ್ಕೆ ಬಿದ್ದು ರಕ್ತಗಾಯವಾಯಿತು ಎಂದರೆ ಸರಿ.

ಪಾಟೀ ಸವಾಲು:

**(ಆರೋಪಿತರ ಪರ ವಕೀಲರ ಕೋರಿಕೆಯ ಮೇರೆಗೆ ಸಾಕ್ಷಿಯ ಪಾಟೀ ಸವಾಲನ್ನು ಮುಂದೂಡಲಾಯಿತು.)**

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ